ತಿದ್ದುಪಡಿಯನ್ನು ಮಾಡಿಕೊಡಲೇಬೇಕು ಎಂದು ಹೇಳಿ ಪಾರ್ಲಿಮೆಂಟ್ ಎದುರುಗಡೆ ಧರಣಿಯನ್ನು ಮಾಡೋಣ. ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ದೊಡ್ಡ ನ್ಯಾಯವನ್ನು ಒದಗಿಸುವಂಥ ಕೆಲಸವನ್ನು ಮಾಡೋಣ. ಆ ಕೆಲಸಕ್ಕೆ ಸರ್ಕಾರದವರು ಇವತ್ತು ತಯಾರಾಗಬೇಕು. ಇದನ್ನು ಮಾಡಲೇಬೇಕು. ಇವತ್ತು ನಾವು ಕೇರಳದ ಮುಖ್ಯಮಂತ್ರಿಗಳಾದ ಅಚ್ಯುತಾನಂದರವರಿಗೆ ಅಭಿನಂದಿಸಬೇಕು. ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಧಾನ ಮಂತ್ರಿಗಳ ಮನೆಯ ಎದುರುಗಡೆ ಹೋಗಿ ಧರಣಿ ಮಾಡುತ್ತೇನೆ ಎನ್ನುವ ಮಾತನ್ನು ಹೇಳಬೇಕಾದರೆ, ಎಷ್ಟು ಅವರಿಗೆ ಕೆಚ್ಚು ಮತ್ತು ಧೈರ್ಯ ಮತ್ತು ರಾಜ್ಯದ ಬಗ್ಗೆ ಎಷ್ಟು ಕಳಕಳಿ ಇದೆ ಎನ್ನುವುದನ್ನು ನಾವು ಮೆಚ್ಚಬೇಕು. ಆ ಪ್ರಕಾರ 371ರ ಕಲಂಗೆ ತಿದ್ದುಪಡಿ ಇವತ್ತು ಮಾಡಬೇಕಾಗಿದ್ದರೆ ನಾವೆಲ್ಲ 224 ಜನ ಶಾಸಕರು ಪಾರ್ಲಿಮೆಂಟಿಗೆ ಹೋಗಿ, ಪ್ರತಿಭಟನೆಯನ್ನು ಮಾಡಿ ನಮಗೆ ನ್ಯಾಯವನ್ನು ಒದಗಿಸಿಕೊಡದೇ ಹೋದರೆ ಸಮಸ್ಯೆ ಖಾಯಂ ಆಗಿ ಅದು ಪಾವಗಡದವರೆಗೆ ಸಮಸ್ಯೆಯಾಗುತ್ತದೆ. ಈ ಕಡೆ ಗುಬ್ಬಿಯವರೆಗೆ ಆಗುತ್ತದೆ, ಈ ಕಡೆ ಕನಕಪುರದವರೆಗೆ ಆಗುತ್ತದೆ. ಈ ತರಹ ರಾಜ್ಯದ ಎಲ್ಲಾ ಅನೇಕ ಭಾಗಗಳಿಗೆ ಅನ್ಯಾಯವಾಗುತ್ತದೆ. ಅಂತಹ ಕಾನೂನನ್ನು ರೂಪಿಸಿಕೊಳ್ಳುವುದಕ್ಕೆ ಈ ಕಾನೂನಿಗೆ ತಿದ್ದುಪಡಿ ಮಾಡಬೇಕಾದುದು ಅವಶ್ಯಕತೆ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತು ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಒಂದು ಪ್ರಕಟಣೆ ಇದೆ.

15. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮ-118ರ ಮೇರೆಗೆ ವಿಧಾನ ಪರಿಷತ್-2007ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ದಿನಾಂಕ 2ನೇ ಆಗಸ್ಟ್ 2007 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.